## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 655(666) |
| ಸದಸ್ಯರ ಹೆಸರು | ಶ್ರೀ ಮಧು ಜಿ ಮಾದೇಗೌಡ<br>(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 11/12/2023 |
| ಉತ್ತರಿಸುವ ಸಚಿವರು | ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ಇಂಜಿನಿಯರಿಂಗ್/ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ (ಪುರುಷ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ) ಹಾಸ್ಟೆಲ್ ವ್ಯವಸ್ಥೆ ಸೂಕ್ತ ಸಂಖ್ಯೆಯಲ್ಲಿ ಇಲ್ಲದಿರುವುದರಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹೆಚ್ಚಿನ ಸರ್ಕಾರಿ ಪಾಲಿಟೆಕ್ನಿಕ್/ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗಾಗಿ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುತ್ತಿದ್ದು, ಬೇಡಿಕೆ ಇರುವ ಕಡೆ ಹಾಸ್ಟೆಲ್‌ಗಳನ್ನು ಕಾಲೇಜುಗಳ ವತಿಯಿಂದ ನಡೆಸಲಾಗುತ್ತಿದೆ.<br><br>ಇದಲ್ಲದೆ, ಸ್ವಂತ ವಿದ್ಯಾರ್ಥಿನಿಲಯಗಳು ಇಲ್ಲದ ಕಡೆ ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಿಂದ ನಡೆಸಲಾಗುತ್ತಿರುವ ಪೋಸ್ಟ್ ಮೆಟ್ರಿಕ್ ಹಾಸ್ಟೆಲ್‌ಗಳಲ್ಲಿ ಪ್ರವೇಶಾವಕಾಶ ನೀಡುತ್ತಿದ್ದು, ಸರ್ಕಾರಿ ಪಾಲಿಟೆಕ್ನಿಕ್ /ಇಂಜಿನಿಯರಿಂಗ್ ಕಾಲೇಜುಗಳ ವಿದ್ಯಾರ್ಥಿಗಳು ಅನುಕೂಲ ಪಡೆಯಬಹುದಾಗಿದೆ.<br><br>2023-24ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 100ರಲ್ಲಿ ಘೋಷಿಸಿರುವಂತೆ, ಉನ್ನತ ಶಿಕ್ಷಣ ಇಲಾಖಾ ವ್ಯಾಪ್ತಿಯ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ ಅಡಿಯ ಕಟ್ಟಡ ಕಾಮಗಾರಿ ಪೂರ್ಣಗೊಂಡಿರುವ/ ಪೂರ್ಣಗೊಂಡು ಹಸ್ತಾಂತರಗೊಂಡಿರುವ ಹಾಗೂ ಪ್ರಗತಿಯಲ್ಲಿರುವ 71 ವಸತಿ ನಿಲಯಗಳನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ತಾತ್ಕಾಲಿಕವಾಗಿ ಹಸ್ತಾಂತರಗೊಳಿಸಿ ಆದೇಶಿಸಲಾಗಿರುತ್ತದೆ. |
| ಆ) | ಬಂದಿದ್ದಲ್ಲಿ, ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೊಸದಾಗಿ ವಸತಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆಯೇ; ಹಾಗಿದ್ದಲ್ಲಿ, ಪುರುಷ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗಾಗಿ ಪ್ರತ್ಯೇಕವಾಗಿ ಎಷ್ಟು ವಸತಿ ಕಟ್ಟಡಗಳನ್ನು ನಿರ್ಮಿಸಲಾಗುವುದು; (ವಿವರ ನೀಡುವುದು) | ಹೊಸದಾಗಿ ವಸತಿನಿಲಯಗಳನ್ನು ನಿರ್ಮಿಸುವ ಬಗ್ಗೆ ಬೇಡಿಕೆ ಹಾಗೂ ಅನುದಾನದ ಲಭ್ಯತೆಯನುಸಾರ ಕ್ರಮವಹಿಸಲಾಗುವುದು.<br><br>ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಸ್ತುತ 120 ಬಾಲಕರ ಹಾಗೂ |

| | | |
|---|---|---|
| ಇ) | ಪ್ರಸ್ತುತ ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ (ಸಾಮಾನ್ಯ, ಎಸ್‌ಸಿ/ಎಸ್‌ಟಿ) ಹಾಗೂ ಪುರುಷ ವಿದ್ಯಾರ್ಥಿಗಳಿಗೆ (ಸಾಮಾನ್ಯ, ಎಸ್‌ಸಿ/ಎಸ್‌ಟಿ) ಮಂಜೂರಾದ, ನಿರ್ಮಾಣವಾಗಿರುವ ಮತ್ತು ಕಾಮಗಾರಿ ಪ್ರಗತಿಯಲ್ಲಿರುವ ಕಟ್ಟಡಗಳ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | 118 ಬಾಲಕಿಯರ ಒಟ್ಟಾರೆ 238 ವಸತಿನಿಲಯಗಳು ಮಂಜೂರಾಗಿರುತ್ತವೆ.<br><br>ಇವುಗಳಲ್ಲಿ 174 ಹಾಸ್ಟೆಲ್‌ಗಳ ಕಾಮಗಾರಿ ಪೂರ್ಣಗೊಂಡಿದ್ದು, 64 ಹಾಸ್ಟೆಲ್‌ಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತವೆ. ವಿವರಗಳನ್ನು ಅನುಬಂಧ-1ರಲ್ಲಿರಿಸಿದೆ. |
| ಈ) | ಪ್ರಗತಿಯಲ್ಲಿರುವ ವಸತಿ ನಿಲಯಗಳ ಕಟ್ಟಡಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಿ ವಿದ್ಯಾರ್ಥಿಗಳ ಉಪಯೋಗಕ್ಕೆ ಒದಗಿಸಲಾಗುವುದು? | ಪ್ರಸ್ತುತ ಪ್ರಗತಿಯಲ್ಲಿರುವ ವಸತಿನಿಲಯಗಳ ಕಾಮಗಾರಿಗಳಿಗೆ ನಿಗದಿಪಡಿಸಲಾದ ಕಾಲಮಿತಿಯೊಳಗೆ ಪೂರ್ಣಗೊಳಿಸಿ ವಿದ್ಯಾರ್ಥಿಗಳ ಉಪಯೋಗಕ್ಕೆ ಒದಗಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಇಡಿ 125 ಹೆಚ್‌ಪಿಟಿ 2023)

(ಡಾ: ಎಂ.ಸಿ.ಸುಧಾಕರ್)
ಉನ್ನತ ಶಿಕ್ಷಣ ಸಚಿವರು

ಅನುಬಂಧ-1

# ತಾಂತ್ರಿಕ ಶಿಕ್ಷಣ ಇಲಾಖೆಯ ವಿವಿಧ ಯೋಜನೆಗಳಡಿ ಮಂಜೂರುಗೊಂಡಿರುವ ಹಾಸ್ಟೆಲ್‌ಗಳ ವಿವರ

| ಸಂಸ್ಥೆ/ಯೋಜನೆ | ರಾಜ್ಯ | | | | | ಎಸ್‌ಸಿಪಿ/ಟಿಎಸ್‌ಪಿ | | | | | ಎಂಹೆಚ್‌ಆರ್‌ಡಿ/ಎಐಸಿಟಿಇ | | | | | ನಬಾರ್ಡ್/ಹೆಚ್‌ಕೆಆರ್‌ಡಿಬಿ | | | | | ಒಟ್ಟು | | ಸಮಗ್ರ | | |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | ಬಾಲಕ | ಬಾಲಕಿ | ಒಟ್ಟಾರೆ | | | ಬಾಲಕ | ಬಾಲಕಿ | ಒಟ್ಟಾರೆ | | | ಬಾಲಕ | ಬಾಲಕಿ | ಒಟ್ಟಾರೆ | | | ಬಾಲಕ | ಬಾಲಕಿ | ಒಟ್ಟಾರೆ | | | ಬಾಲಕ | ಬಾಲಕಿ | | | |
| | | | ಪೂರ್ಣ | ಪ್ರಗತಿ | ಒಟ್ಟು | | | ಪೂರ್ಣ | ಪ್ರಗತಿ | ಒಟ್ಟು | | | ಪೂರ್ಣ | ಪ್ರಗತಿ | ಒಟ್ಟು | | | ಪೂರ್ಣ | ಪ್ರಗತಿ | ಒಟ್ಟು | | | ಪೂರ್ಣ | ಪ್ರಗತಿ | ಒಟ್ಟು |
| ಸರ್ಕಾರಿ ಪಾಲಿಟೆಕ್ನಿಕ್‌ಗಳು | 24 | 31 | 46 | 9 | 55 | 69 | 17 | 53 | 33 | 86 | 0 | 56 | 44 | 12 | 56 | 7 | 0 | 6 | 1 | 7 | 100 | 104 | 149 | 55 | 204 |
| ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳು | 17 | 5 | 15 | 7 | 22 | 1 | 8 | 7 | 2 | 9 | 1 | 1 | 2 | 0 | 2 | 1 | 0 | 1 | 0 | 1 | 20 | 14 | 25 | 9 | 34 |
| ಒಟ್ಟು | **41** | **36** | **61** | **16** | **77** | **70** | **25** | **60** | **35** | **95** | **1** | **57** | **46** | **12** | **58** | **8** | **0** | **7** | **1** | **8** | **120** | **118** | **174** | **64** | **238** |

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ